ನವಶಿಕ್ಷಣ ಚಿಂತನ ಮಾಲಿಕೆ – ೧೧

ಕಿರುದರ್ಪಣ

ಶಾಲಾ ಶಿಕ್ಷಣದ ಕಿರು ಇತಿಹಾಸ

ಶಾಲೆಗಳನ್ನು ನಾವೀಗ ಐತಿಹಾಸಿಕ ದೃಷ್ಟಿಕೋನದಿಂದ ನೋಡಬೇಕಾಗಿದೆ

ಮೂಲ : ೀಟರ್ ಗ್ರೇ । ಅನುವಾದ : ಎಸ್. ಎನ್. ಗಣನಾಥ

ನಮ್ಮ ನುಡಿ

ಆತ್ಮೀಯರೇ,

'ಎಲ್ಲವೂ ಇದ್ದೂ, ಏನೋ ಒಂದು ಮುಖ್ಯವಾದುದೇ ಇಲ್ಲವಲ್ಲ!' ಎಂದು ವ್ಯಥೆಯ ಭಾವನೆಗಳು ಮೂಡುವ ಸ್ಥಿತಿ ಇಂದು ಎಲ್ಲ ರಂಗಗಳಲ್ಲೂ ಎದ್ದುಕಾಣುತ್ತಿದೆ. 'ಅಭಿವೃದ್ಧಿಯ ಇಂದ್ರಲೋಕ' ಕಣ್ಣುಕುಕ್ಕಿಸುತ್ತ ಬೃಹತ್ತಾಗಿ ಬೆಳೆಯುತ್ತಲಿದೆ! ಯಾಕೆ ಹೀಗೆ? ಬಹುಶಃ, ಎಲ್ಲ ಬೆಳವಣಿಗೆ ಅಭಿವೃದ್ಧಿಗಳು ಮಾನವನ, ಅಂದರೆ ನಮ್ಮ ಬೌದ್ಧಿಕ ಕ್ರಿಯಾಶೀಲತೆಯ – ಕಸರತ್ತಿನ ಫಲ. ಇದರ ಲಕ್ಷಣವೇ ನೋಡುವವರ ಕಣ್ಣು ಕುಕ್ಕುವಂತೆ ಮಾಡುವುದೇ ಏನೋ?! ಆದರೆ ಹೃದಯ ಮನಸ್ಸು – ಪ್ರಜ್ಞೆ – ಪ್ರಜ್ಞಾವಂತಿಕೆಯನ್ನು ಗಣನೆಗೇ ತೆಗೆದುಕೊಳ್ಳದೇ ನಡೆಯುವ ಅಭಿವೃದ್ಧಿಯ ಇಂದ್ರಲೋಕ ಮನುಷ್ಯ ಜಗತ್ತನ್ನು ಮಾತ್ರವಲ್ಲ, ಇಡೀ ಭೂಮಂಡಲದ ಸಕಲ ಜೀವ ಜಗತ್ತಿಗೂ, ಪ್ರಕೃತಿಗೂ ಮಾರಕಾವಾಗಿಯೇ ಪರಿಣಮಿಸುತ್ತಿದೆ ಎಂಬುದಕ್ಕೆ ಬೆಟ್ಟದಷ್ಟು ವಿದ್ಯಮಾನಗಳು ಮಾಹಿತಿಗಳು ನಮ್ಮ ಕಣ್ಣ ಮುಂದಿವೆ.

ಇಂಥ ಹೊತ್ತಿನಲ್ಲಿ ಒಟ್ಟು ಜೀವನದ ಬಗ್ಗೆ ಸರಿಯಾಗಿ ಹೊಸದಾಗಿ ಆಲೋಚಿಸಬೇಕಾದ ತುರ್ತು ಉಂಟಾಗಿದೆ. ನಾವು ಬದುಕುತ್ತಿರುವ ರೀತಿ ಸರಿಯಿದೆಯೆ? ಎಂದು ಪುನಃ ಪುನಃ ಪ್ರಶ್ನಿಸಿಕೊಳ್ಳಬೇಕಾಗಿದೆ. ಒಂದರ್ಥದಲ್ಲಿ ಇದುವೇ ನಿಜವಾದ ಆಧ್ಯಾತ್ಮಿಕ ಪ್ರಶ್ನೆ ಎಂದು ಹೇಳಬಹುದು. ಇದನ್ನು ಸಾಧ್ಯವಾಗಿಸುವಂತಹುದನ್ನು ಮಾತ್ರ ನಾವು ಶಿಕ್ಷಣ ಎಂದು ಗುರುತಿಸಬೇಕಾದ ಅಗತ್ಯವಿದೆ. ನಿರ್ದಿಷ್ಟ ತರಗತಿ ಕಟ್ಟಡ, ನಿಗದಿತ ಪಠ್ಯಕ್ರಮ, ನಿಗದಿತ ವೇಳಾಪಟ್ಟಿ, ನಿಗದಿತ ವಿದ್ಯಾರ್ಹತೆಯುಳ್ಳ ನಿರ್ದಿಷ್ಟ ಶಿಸ್ತಿನ ಶಿಕ್ಷಕರು, ನಿಗದಿತ ಸಮವಸ್ತ್ರ, ನಿಗದಿತ ಪರೀಕ್ಷೆ, ನಿಗದಿತ ನೌಕರಿ, ಚಾಕರಿ, ಮದುವೆ, ... ಇಂಥ ಚೌಕಟ್ಟುಗಳಿಗೆ ಸೀಮಿತವಾಗಿರುವ ಬದುಕಿನ ಗುಣಮಟ್ಟಗಳ ಬಗ್ಗೆ ಹೊಸ ನೋಟದಿಂದ ಆಲೋಚಿಸಬೇಕಾದ ಸಮಯ ಬಂದಿದೆ. ಹರಿಯುವ ಚಲಿಸುವ ಗುಣವುಳ್ಳ ಬದುಕನ್ನು ನಿಂತ ನೀರಾಗಿಸಲು ಇರುವ ಕಾರಣಗಳನ್ನು ಸಂಗತಿಗಳನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ನಡೆಯಬೇಕಾದ ಅಗತ್ಯವಿದೆ.

ಈ ದಿಸೆಯಲ್ಲಿ ತೀವ್ರವಾಗಿ ಶೋಧನೆ–ಬೋಧನೆ ಜಗತ್ತಿನಾದ್ಯಂತ ನಡೆದಿದೆ. ಬದುಕು ಮತ್ತು ಶಿಕ್ಷಣದ ಬಗ್ಗೆ ಹೊಸ ಆಲೋಚನೆಗೆ ತೊಡಗಿಸಲು ಪ್ರೇರಣೆ – ಸ್ಫೂರ್ತಿ ನೀಡುವ ಅಂಥ ಚಿಂತನೆಗಳನ್ನು ನಮ್ಮ ಹೃದಯ – ಬುದ್ಧಿಗೆ ಹತ್ತಿರ ಮಾಡಿಕೊಳ್ಳಬೇಕಾದ ಜರೂರು ಇದೆ. ಈ ಉದ್ದೇಶದಿಂದ ಕರ್ನಾಟಕ ಎಜುಕೇಷನ್ ನೆಟ್ವರ್ಕ್ ಮೂಲಕ ಅನುಷ್ಠಾನಗೊಂಡ ವಿದ್ಯಾಶಿಲ್ಪ ಯೋಜನೆಯಡಿ ಹಲವು ಲೇಖನಗಳನ್ನು ಅನುವಾದಿಸಿ 'ನವಶಿಕ್ಷಣ ಚಿಂತನ ಮಾಲಿಕೆ'ಯ ಮೂಲಕ ಕಿರುಪುಸ್ತಿಕೆ ರೂಪದಲ್ಲಿ ಪ್ರಕಟಿಸಲಾಗಿತ್ತು. ವಿವಿಧ ಚಿಂತಕರ ಗಾಢಚಿಂತನೆಗಳಿಗೆ ಪ್ರವೇಶಿಕೆಯಾಗಿ ಈ ಕಿರುಪುಸ್ತಿಕೆಗಳು

ಸಹಾಯಕವಾಗಬಲ್ಲವು. ಇವುಗಳನ್ನು ಓದಿದ ಬಳಿಕ, ನಮ್ಮ ನಮ್ಮಲ್ಲಿ ಮೂಡುವ ಚಿಂತನೆಗಳನ್ನು ಕುರಿತು ಆಸಕ್ತರೊಂದಿಗೆ, ಗೆಳೆಯರೊಂದಿಗೆ, ಸಮಾನ ಮನಸ್ಕರೊಂದಿಗೆ ಚರ್ಚಿಸುವ, ಸಂವಾದ ನಡೆಸುವ ಪ್ರಕ್ರಿಯೆ ಮುಂದುವರೆಯಬೇಕು. ಇದುವೇ ಬದುಕಿಗೆ ಹೊಸಬೆಳಕನ್ನು ತಂದುಕೊಳ್ಳುವ ಅರ್ಥಪೂರ್ಣ ದಾರಿ.

ಶಾಲಾಶಿಕ್ಷಣದ ಹುಟ್ಟು ಮತ್ತು ಬೆಳವಣಿಗೆಯನ್ನು ಚಾರಿತ್ರಿಕ ದೃಷ್ಟಿಕೋನದಿಂದ ನೋಡುವುದರಿಂದ ಸಿಗಬಹುದಾದ ಒಳನೋಟಗಳ ಕುರಿತು, ಹಾಗೆಯೇ ಇಂದಿನ ಶಾಲೆಗಳನ್ನು ಅರಿಯುವ ಇನ್ನೊಂದು ಸಾಧನವಾಗಿಯೂ ಈ ಪ್ರಯತ್ನ ಮಹತ್ವದ ಹೆಜ್ಜೆಯಾಗಿದೆ.

ಈ ಕಿರುಹೊತ್ತಿಗೆಗಳು www.dhwanitrust.org ಈ ಅಂತರ್ಜಾಲ ತಾಣದಲ್ಲಿ ಲಭ್ಯವಿದೆ. ಆಸಕ್ತರು ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲಿ ಬದುಕು ಮತ್ತು ಶಿಕ್ಷಣ ಕುರಿತಂತೆ ಇನ್ನೂ ಹೆಚ್ಚಿನ ಚಿಂತನೆಗಳು, ಚರ್ಚೆಗಳು, ಸಂವಾದಗಳು ನಡೆಯುತ್ತಿವೆ. ಅವುಗಳಲ್ಲಿ ತಾವೂ ದಯಮಾಡಿ ಭಾಗವಹಿಸಿ.

– ಶಿಕ್ಷಾಂತರ್ ಯೋಜನೆ ಬಳಗ

ಶಾಲಾ ಶಿಕ್ಷಣದ ಕಿರು ಇತಿಹಾಸ

ಶಾಲೆಗಳನ್ನು ನಾವೀಗ ಐತಿಹಾಸಿಕ ದೃಷ್ಟಿಕೋನದಿಂದ ನೋಡಬೇಕಾಗಿದೆ.

ಜಗತ್ತಿನ ಎಲ್ಲೆಡೆ ಶಾಲಾಶಿಕ್ಷಣ ಕಾನೂನಾತ್ಮಕವಾಗಿ ಕಡ್ಡಾಯವಾಗಿರುವುದು, ಶಾಲೆಗಳೆಲ್ಲವೂ ಹೆಚ್ಚು ಕಡಿಮೆ ಏಕರೂಪದಲ್ಲಿರುವುದು, ಅಂತಹ ಶಾಲೆಗಳನ್ನು ಮಕ್ಕಳಿಗೋಸ್ಕರ ರೂ ಸಲು ಇಡೀ ಸಮಾಜವೇ ತುದಿಗಾಲಲ್ಲಿ ನಿಂತಿರುವುದು ಇವೆಲ್ಲವನ್ನೂ ನೋಡುತ್ತಿದ್ದರೆ ಇವೆಲ್ಲದರ ಹಿಂದೆ ಒಂದಷ್ಟು ತಾರ್ಕಿಕ ಕಾರಣಗಳು ಮತ್ತು ಸದುದ್ದೇಶ ಇದ್ದೇ ಇರಬೇಕು ಎಂಬ ಭಾವನೆ ನಮಗೆ ಮೂಡುವುದು ಸಹಜ. ಮಕ್ಕಳನ್ನು ಬಲವಂತದಿಂದ ಶಾಲೆಗೆ ಕಳಿಸದಿದ್ದರೆ ಅಥವಾ ಶಾಲೆಗಳು ಈಗಿರುವುದಕ್ಕಿಂತ ಬೇರೆ ರೀತಿ ಇದ್ದರೆ ನಮ್ಮ ಮಕ್ಕಳು ಸಮರ್ಥ ವ್ಯಕ್ತಿಗಳಾಗುವುದಿಲ್ಲವೇನೋ ಎಂಬ ಅನುಮಾನವೂ ಬಂದೀತು. ಬಹುಶಃ ಅನೇಕ ಮೇಧಾವಿಗಳು ಇದರ ಇದರ ಬಗ್ಗೆ ತಿಳಿದಿರಬೇಕು ಮತ್ತು ಇದರ ಸಾಧಕ–ಬಾಧಕಗಳನ್ನು ಕುರಿತು ಆಲೋಚಿಸಿರಬೇಕು; ಮಕ್ಕಳ ಬೆಳವಣಿಗೆ ಮತ್ತು ಶಿಕ್ಷಣದ ಬಗ್ಗೆ ಪರ್ಯಾಯ ವಿಧಾನಗಳನ್ನು ಪ್ರಯೋಗಿಸಿ ಅವು ಕಾರ್ಯಸಾಧ್ಯವಲ್ಲ ಎಂಬ ಖಚಿತ ತೀರ್ಮಾನಕ್ಕೆ ಬಂದಿರಬೇಕು. ಹಾಗಾಗಿಯೇ ಇಂದು ಶಾಲಾಶಿಕ್ಷಣದ ಈ ಸ್ವರೂಪವನ್ನು ಒ ್ಪಕೊಂಡಿದ್ದೇವೆ ಎಂದೆನಿಸುವುದಿಲ್ಲವೇ?

ನನ್ನ ಹಿಂದಿನ ಲೇಖನವೊಂದರಲ್ಲಿ ಈ ತೀರ್ಮಾನಕ್ಕೆ ವಿರುದ್ಧವಾದ ಪುರಾವೆಗಳನ್ನು ಒದಗಿಸಿದ್ದೆ. ವಿಶೇಷವಾಗಿ 40 ವರ್ಷಗಳಿಂದಲೂ ಪಾರಂಪರಿಕ ಶಾಲೆಯ ಎಲ್ಲ ನಂಬಿಕೆಗಳ ವಿರುದ್ಧವಾಗಿ ನಡೆಯುತ್ತಿರುವ ಸಡ್‌ಬರಿ ಶಾಲೆಯ ಬಗ್ಗೆ ಹಾಗೂ ಅಲ್ಲಿ ಮಕ್ಕಳು ಶಿಕ್ಷಿತರಾಗುತ್ತಿರುವ ಬಗ್ಗೆಯೂ ಪ್ರಸ್ತಾ ಸಿದ್ದೆ. ಆ ಶಾಲೆಯ ಮತ್ತು ಅಲ್ಲಿ ಕಲಿತ ಮಕ್ಕಳ ಬಗ್ಗೆ ನಡೆದ ಸಂಶೋಧನೆಗಳು ಹೇಗೆ ಯಾವ ವಿಶೇಷ ಪ್ರತಿಭೆಯೂ ಇಲ್ಲದ ಸಾಧಾರಣ ಮಕ್ಕಳು ದೊಡ್ಡವರ ಮಾರ್ಗದರ್ಶನವೇನೂ ಇಲ್ಲದೆ ತಮ್ಮದೇ ಆಟ

ಮತ್ತು ಅನ್ವೇಷಣೆಯ ಮೂಲಕ ಶಿಕ್ಷಣವನ್ನು ಪಡೆದು ಬೆಳೆದು ದೊಡ್ಡವರಾಗಿ ಅರ್ಥಪೂರ್ಣ, ಉತ್ತಮ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂದು ತೋರಿಸುತ್ತವೆ. ಮಕ್ಕಳಿಗೆ ಮಾರ್ಗದರ್ಶನ ತೋರಿಸಿ ಅವರನ್ನು ಪ್ರಚೋದಿಸುವಂಥ ಯಾವ ಕೆಲಸವನ್ನೂ ಮಾಡದ ಈ ಶಾಲೆಯು ಅವರು ಆಡಲು, ಹುಡುಕಾಟ ನಡೆಸಲು ಮತ್ತು ಪ್ರಜಾಪ್ರಭುತ್ವದ ನೇರ ಅನುಭವ ಪಡೆಯಲು ಅನುವು ಮಾಡಿಕೊಡುವ ಅದ್ಭುತ ವಾತಾವರಣವನ್ನು ಮಾತ್ರ ನಿರ್ಮಿಸಿದೆ. ಇದು ಕೂಡ ಕಡಿಮೆ ಖರ್ಚಿನಲ್ಲಿ ಮತ್ತು ರೂಢಿಗತ ಶಾಲೆಗಳನ್ನು ನಡೆಸುವ ತಲೆನೋವಿನ ಒಂದು ಭಾಗದಲ್ಲಿ ಮಾತ್ರ. ಹಾಗಿದ್ದರೆ "ಹೆಚ್ಚಿನ ಶಾಲೆಗಳೇಕೆ ಹೀಗಿಲ್ಲ ?" ಎಂಬ ಪ್ರಶ್ನೆ ಬರುವುದು ಸಹಜವಲ್ಲವೇ?

ಸಾಮಾನ್ಯವಾಗಿ ಎಲ್ಲ ಶಾಲೆಗಳು ಈಗಿರುವ ಸ್ಥಿತಿಯಲ್ಲಿ ಏಕಿವೆ ಎಂದು ತಿಳಿಯಬೇಕಾದರೆ ಅವುಗಳು ಒಂದು ತಾರ್ಕಿಕ ಅಗತ್ಯ ಇಲ್ಲವೇ ವೈಜ್ಞಾನಿಕ ಒಳನೋಟದಿಂದ ಉದ್ಭವವಾಗಿರಬೇಕು ಎಂಬ ಊಹೆಯನ್ನು ನಿಮ್ಮ ಮನಸ್ಸಿನಿಂದ ಕಿತ್ತೊಗೆಯಬೇಕು. ಬದಲಾಗಿ ಅವು ಹೀಗಿರುವುದು ಚಾರಿತ್ರಿಕ ಕಾರಣಗಳಿಗೋಸ್ಕರ ಎಂಬುದನ್ನು ಅರಿಯಬೇಕು. ಈಗಿರುವ ಶಾಲಾವ್ಯವಸ್ಥೆಯನ್ನು ಚಾರಿತ್ರಿಕ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ಅದು ನಮಗೆ ಅರ್ಥವಾಗಲು ಸಾಧ್ಯ. ಹಾಗಾಗಿ ಶಾಲೆಗಳು ಏಕೆ ಈಗಿರುವಂತೆ ಎಂದು ವಿವರಿಸುವ ಸಲುವಾಗಿ ನಾನೀಗ ಮನುಕುಲದ ಆದಿಯಿಂದ ಇಂದಿನವರಗೆ ಆಗಿರುವ ಶಿಕ್ಷಣದ ಇತಿಹಾಸದ ಪಕ್ಷಿನೋಟವನ್ನು ಕೊಡುತ್ತೇನೆ. ಶಿಕ್ಷಣದ ಇತಿಹಾಸದ ತಜ್ಞರಲ್ಲಿ ಈ ಕುರಿತಂತೆ ಸಹಜವಾಗಿಯೇ ಒಂದಷ್ಟು ಭಿನ್ನಾಭಿಪ್ರಾಯಗಳಿರಲು ಸಾಧ್ಯವೆಂದು ಭಾವಿಸಬಹುದಾದರೂ ಒಟ್ಟಾರೆ ಇದರ ಚೌಕಟ್ಟು ಸರಿಯಾಗಿದೆಯೆಂದು ಅವರು ಒಪ್ಪುತ್ತಾರೆಂಬ ನಂಬಿಕೆ ನನಗಿದೆ. ವಾಸ್ತವವಾಗಿ, ಆ ತಜ್ಞರ ಲೇಖನಗಳನ್ನೇ ನಾನಿಲ್ಲಿ ಬಳಸಿಕೊಂಡಿದ್ದೇನೆ.

ಮೊದಲನೆಯದಾಗಿ ಲಕ್ಷ ವರ್ಷಕ್ಕೂ ಹೆಚ್ಚು ಕಾಲ ಮಕ್ಕಳು ಸ್ವನಿರ್ದೇಶಿತ ಆಟ ಮತ್ತು ಹುಡುಕಾಟದ ಮೂಲಕ ತಮ್ಮ ಶಿಕ್ಷಣವನ್ನು ತಾವೇ ಪಡೆಯುತ್ತಿದ್ದರು.
ಮಾನವರ ಜೈವಿಕ ಇತಿಹಾಸಕ್ಕೆ ಹೋಲಿಸಿದರೆ ಶಾಲೆಗಳು ತೀರಾ ತೀರಾ ಇತ್ತೀಚಿನ ಸಂಸ್ಥೆಗಳು. ಕೃಷಿಯಾಧಾರಿತ ಬದುಕಿಗೆ ಬರುವ ಮುನ್ನ ಲಕ್ಷಾಂತರ ವರ್ಷಗಳು ನಾವು ಬೇಟೆಯಾಡುತ್ತಾ ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾ ಬದುಕುತ್ತಿದ್ದೆವು. ನನ್ನ ಲೇಖನವೊಂದರಲ್ಲಿ ತಿಳಿಸಿದಂತೆ ಆ ಸನ್ನಿವೇಶದಲ್ಲಿ ಮಕ್ಕಳು ತಾವು ದೊಡ್ಡವರಾದಾಗ ಬೇಕಾದ ಜೀವನಕೌಶಲವನ್ನು ತಾವೇ ಆಟ ಮತ್ತು ಅನ್ವೇಷಣೆಯ ಮೂಲಕ ಕಲಿಯುತ್ತಿದ್ದರೆಂದು ಹೇಳಲು ಮಾನವಶಾಸ್ತ್ರದ ಅಧ್ಯಯನದಲ್ಲಿ ಆಧಾರಗಳಿವೆ. ಆಟದಲ್ಲಿ ಮತ್ತು ಅನ್ವೇಷಣೆಯ ಬಗೆಗೆ ಮಕ್ಕಳಲ್ಲಿ ಸುಪ್ತವಾಗಿರುವ ಆಸಕ್ತಿಯು ಬಹುಶಃ ಮಾನವಜನಾಂಗವು ಬೇಟೆಯಾಡಿ ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾ ಬದುಕುತ್ತಿದ್ದ

ಕಾಲದಲ್ಲೇ ಕಲಿಯುವ ಅಗತ್ಯಗಳಿಗೆ ಅನುಗುಣವಾಗಿ ವಿಕಾಸಗೊಂಡಿರಬೇಕು. ಆಗ ಹಿರಿಯರು ಮಕ್ಕಳಿಗೆ ಇಂಥ ಚಟುವಟಿಕೆಗಳಿಗೆ ಅನಿರ್ಬಂಧಿತ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ಏಕೆಂದರೆ ಅದು ಮಕ್ಕಳ ಸಹಜ ಕಲಿಕೆಯ ದಾರಿಯೆಂದು ಅವರಿಗೆ ಗೊತ್ತಿತ್ತು.

ಮುಂದೆ ಕೃಷಿ, ತದನಂತರ ಕೈಗಾರಿಕೀಕರಣ ಬೆಳೆದಂತೆ ಮಕ್ಕಳು ಅಕ್ಷರಶಃ ಬಲವಂತದ ಕಾರ್ಮಿಕರಾಗಿಬಿಟ್ಟರು. ಆಟ ಮತ್ತು ಅನ್ವೇಷಣೆಗಳು ಹತ್ತಿಕ್ಕಲ್ಪಟ್ಟವು. ಸದ್ಗುಣವಾಗಿದ್ದ ಅಸ್ಮಿತೆಯು ಒಮ್ಮೆಗೇ ದುರ್ಗುಣವಾಗಿಬಿಟ್ಟಿತು.

ಸುಮಾರು 10,000 ವರ್ಷಗಳ ಹಿಂದೆ ಕೃಷಿಯನ್ನು – ಮೊದಮೊದಲು ಕೆಲವೆಡೆ ಮತ್ತು ನಂತರದ ಘಟ್ಟದಲ್ಲಿ ಎಲ್ಲೆಡೆ – ಮಾನವನು ಕಂಡುಹಿಡಿದ ನಂತರ ಜನರು ಬದುಕುವ ರೀತಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಿಬಿಟ್ಟಿತು. ಕೃಷಿಪೂರ್ವ ಬದುಕು ಕೌಶಲ್ಯಾಧಾರಿತವೂ ಜ್ಞಾನಾಧಾರಿತವೂ ಆಗಿತ್ತಾದರೂ ಅದು ದೈಹಿಕ ಶ್ರಮವನ್ನು ಹೆಚ್ಚು ಬೇಡುತ್ತಿರಲಿಲ್ಲ. ಉತ್ತಮ ಬೇಟೆಗಾರರಾಗಲು ಮತ್ತು ಗೆಡ್ಡೆಗೆಣಸುಗಳನ್ನು ಸಂಗ್ರಹಿಸಲು ಅವರಿಗೆ ಸಸ್ಯ, ಪ್ರಾಣಿಗಳ ಬಗ್ಗೆ ಮತ್ತು ಕಾಡಿನ ಭೂಗೋಳದ ಬಗ್ಗೆ ಅಪಾರ ಜ್ಞಾನ ಇರಬೇಕಾಗುತ್ತದೆ. ಆಹಾರವನ್ನು ಹುಡುಕಲು ಅವರಿಗೆ ಕರ್ತೃತ್ವಶಕ್ತಿಯೂ ಸೃಜನಶೀಲತೆಯೂ ಬೇಕಾಗುತ್ತಿತ್ತು. ಈ ಕೆಲಸಗಳಿಗೆ ಅಗತ್ಯವಾಗಿ ಬೇಕಾಗುವ ಉಪಕರಣಗಳನ್ನು ತಯಾರಿಸಿಕೊಳ್ಳುವ ಕುಶಲಕಲೆಯೂ ಅವರಿಗೆ ಇರಬೇಕಿತ್ತು. ಆದರೆ ಅವರು ದಿನಕ್ಕೆ ಅನೇಕ ಗಂಟೆಗಳ ಕಾಲ ಕೆಲಸ ಮಾಡಬೇಕಾಗಿರಲಿಲ್ಲ. ಅವರ ಕೆಲಸದಲ್ಲಿ ಉತ್ಸಾಹವಿತ್ತು; ಆದರೆ ಬೇಸರ ಇರಲಿಲ್ಲವೆನ್ನಬಹುದು. ಇಂಥ ಸಮುದಾಯಗಳನ್ನು ಅಭ್ಯಸಿಸಿದ ಮಾನವಶಾಸ್ತ್ರಜ್ಞರ ಪ್ರಕಾರ ಅವರು ಕೆಲಸ ಮತ್ತು ಆಟವನ್ನು ಪ್ರತ್ಯೇಕವಾಗಿ ನೋಡುತ್ತಿರಲಿಲ್ಲ. ಏಕೆಂದರೆ ಅವರಿಗೆ ಇಡೀ ಜೀವನವೇ ಒಂದು ಆಟವಾಗಿತ್ತು.

ಕಾಲಕ್ರಮೇಣ ಕೃಷಿ ಇದೆಲ್ಲವನ್ನೂ ಬದಲಾಯಿಸಿಬಿಟ್ಟಿತು. ಕೃಷಿಯಿಂದ ಆಹಾರದ ಲಭ್ಯತೆ ಹೆಚ್ಚಿ ಹೆಚ್ಚು ಮಕ್ಕಳು ಜನಿಸಿದರು. ಜನರು ಒಂದೆಡೆ ನೆಲೆಸಲು ಸಾಧ್ಯವಾಯಿತು. ಹಾಗೆ ವಾಸ ಮಾಡುವುದು ಕಡ್ಡಾಯವಾಯಿತು ಎಂದೂ ಹೇಳಬಹುದು. ಬೆಳೆ ಬೆಳೆದ ಜಾಗದಲ್ಲಿ ಎಲ್ಲರೂ ವಾಸಿಸತೊಡಗಿದ ಮೇಲೆ ಆಸ್ತಿಯನ್ನು ಹೊಂದಬೇಕೆಂಬ ಇರಾದೆ ಉಂಟಾಯಿತು. ಆದರೆ ಈ ಬದಲಾವಣೆಗಳ ಜತೆಗೇ ಹೆಚ್ಚು ಶ್ರಮ ಪಡಬೇಕಾದ ಅಗತ್ಯವೂ ಉಂಟಾಯಿತು. ಕೃಷಿಯಲ್ಲಿ ತೊಡಗುವ ಮೊದಲು ಅವರು ಪ್ರಕೃತಿ ಬೆಳೆದುಕೊಟ್ಟ ಆಹಾರವನ್ನು ಸಂಗ್ರಹಿಸಿ ತಿನ್ನುತ್ತಿದ್ದರೆ ನಂತರ ತಾವೇ ಉತ್ತಿ, ಬಿತ್ತಿ, ಪೈರನ್ನು ಬೆಳೆಸುವುದಲ್ಲದೆ ಪ್ರಾಣಿಗಳನ್ನೂ ಸಾಕಿ ಬೆಳೆಸಬೇಕಾಗಿತ್ತು. ಅಲ್ಲದೆ ಕೃಷಿಯಲ್ಲಿ ಯಶಸ್ವಿಯಾಗಲು ಕುಶಲತೆ ಬೇಡದ ಚರ್ವಿತಚರ್ವಣದಂಥ ಕೆಲಸಗಳನ್ನು

ಸಾಕಷ್ಟು ಮಾಡಬೇಕಾಗುತ್ತಿತ್ತು. ಇಂಥವನ್ನು ಮಕ್ಕಳು ಮಾಡಬಹುದೆಂದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಕುಟುಂಬಗಳು ದೊಡ್ಡದಾದಂತೆ ಮಕ್ಕಳ ಜವಾಬ್ದಾರಿಗಳೂ ಹೆಚ್ಚಿ ಅವರು ತಮ್ಮ-ತಂಗಿಯರಿಗೆ ಅಗತ್ಯವಾದ ಆಹಾರವನ್ನು ಬೆಳೆಯುವ ಸಲುವಾಗಿ ಹೊಲದಲ್ಲಿ ಕೆಲಸ ಮಾಡಬೇಕಾಯಿತು. ಇದಲ್ಲದಿದ್ದರೆ ಅವರನ್ನು ನೋಡಿಕೊಳ್ಳಲು ಮನೆಯಲ್ಲಿ ಕೆಲಸ ಮಾಡಬೇಕಿತ್ತು. ಹಾಗಾಗಿ ಮಕ್ಕಳ ಬದುಕು ಕ್ರಮೇಣ ಬದಲಾಗುತ್ತಾ ಹೋಯಿತು. ತಮಗೆ ಇಷ್ಟವೆನಿಸಿದ ಕೆಲಸಗಳನ್ನು ಮಾಡುವುದರ ಬದಲಾಗಿ ತಮ್ಮ ಕುಟುಂಬದ ಕೆಲಸಗಳಿಗೆ ಸಮಯ ಕೊಡುವುದು ಅನಿವಾರ್ಯವಾಗಿ ಹೆಚ್ಚುತ್ತಾ ಹೋಯಿತು.

ಕೃಷಿ ಮತ್ತು ಅದರಿಂದ ಆರಂಭವಾದ ಭೂಮಿಯ ಒಡೆತನ ಮತ್ತು ಆಸ್ತಿಗಳಿಕೆಯಿಂದಾದ ಮುಖ್ಯ ಪರಿಣಾಮವೆಂದರೆ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವರ್ಗಭೇದ ಉಂಟಾದದ್ದು. ಆಗ ಭೂಹೀನರು ಭೂಮಾಲೀಕರ ಆಶ್ರಯದಲ್ಲಿ ಇರಬೇಕಾಯಿತು. ಇದೇ ಸಂದರ್ಭದಲ್ಲಿ ಉಳಿದವರಿಂದ ಕೆಲಸ ಮಾಡಿಸಿಕೊಂಡು ತಾವು ಶ್ರೀಮಂತರಾಗಬಹುದೆಂದು ಭೂಮಾಲೀಕರು ಕಂಡುಕೊಂಡರು. ಜೀತಪದ್ಧತಿಗೆ ಇದು ದಾರಿಯಾಗಿ ಶ್ರೀಮಂತರು ಬಡವರನ್ನು ಶೋಷಿಸುತ್ತ ತಾವು ಮತ್ತಷ್ಟು ಶ್ರೀಮಂತರಾಗಲು ಸಾಧ್ಯವಾಯಿತು. ಇದು ಊಳಿಗಮಾನ್ಯ ಪದ್ಧತಿಗೆ ಎಡೆಮಾಡಿಕೊಟ್ಟು ಸಮಾಜವು ಧ್ರುವೀಕರಣಗೊಂಡು ಮೇಲ್‌ಸ್ತರದಲ್ಲಿ ರಾಜರು/ಜಮೀನ್ದಾರರೂ ಮತ್ತು ಕೆಳಸ್ತರದಲ್ಲಿ ಸಾಮಾನ್ಯರೂ, ಗುಲಾಮರೂ ಇರುವ ಪರಿಸ್ಥಿತಿ ಉಂಟಾಯಿತು. ಸಮಾಜದ ಹೆಚ್ಚಿನಂಶ ಜನರು (ಮತ್ತು ಮಕ್ಕಳು) 'ದೊಡ್ಡವರ' ಸೇವೆ ಮಾಡಿಕೊಂಡಿರಬೇಕಾಯಿತು. ಆಗ ಮಕ್ಕಳು ಕಲಿಯಬೇಕಾಗಿದ್ದ ಅತಿದೊಡ್ಡ ಪಾಠವೆಂದರೆ ವಿಧೇಯತೆ, ತಮ್ಮ ಮನಸ್ಸಾಕ್ಷಿಯನ್ನು ಹತ್ತಿಕ್ಕಿಕೊಂಡಿರುವುದು ಮತ್ತು 'ದೊಡ್ಡವರ' ಬಗ್ಗೆ ಪೂಜ್ಯಭಾವ. ಬಂಡಾಯ ಮನೋಭಾವವು ನಿಮ್ಮನ್ನು ನೇರವಾಗಿ ಸಾವಿನೆಡೆಗೆ ಕರೆದೊಯ್ಯಬಹುದಿತ್ತು.

ಮಧ್ಯಯುಗದಲ್ಲಿ, ಮಕ್ಕಳು ತಮ್ಮ ಮಾತನ್ನು ಪಾಲಿಸುವಂತೆ ಮಾಡಲು ಅವರನ್ನು ಹೊಡೆಯುವುದರಲ್ಲಿ ದೊಡ್ಡವರಿಗೆ ಯಾವುದೇ ತಪ್ಪು ಕಾಣುತ್ತಿರಲಿಲ್ಲ. ಉದಾಹರಣೆಗೆ: 14ನೇ ಶತಮಾನದ ಕೊನೆಯ ಅಥವಾ 15ನೇ ಶತಮಾನದ ಆದಿಭಾಗದ ಒಂದು ದಾಖಲೆಯಲ್ಲಿ "ಜಮೀನ್ದಾರರು ಏಳು ಅಥವಾ ಎಂಟು ವರ್ಷದ ವಯಸ್ಸಿನ ಹುಡುಗನನ್ನು ಆಯ್ಕೆ ಮಾಡಬೇಕು. ಮತ್ತು ಒಡೆಯನು ಹೇಳಿದ್ದನ್ನು ಮಾಡದಿದ್ದರೆ ಭಯಪಡುವ ರೀತಿಯಲ್ಲಿ ಹೊಡೆಯಬೇಕು. [1]" ಎಂದು ಹೇಳಲಾಗಿದೆ. ಅಂಥ ಹುಡುಗನ ದಿನಚರಿ ಹೇಗಿರಬೇಕು? ಅವನು ಮಾಡಬೇಕಾದ ಕೆಲಸಗಳು ಏನಿರಬೇಕು? ಈ ಬಗೆಯ ಪಟ್ಟಿಯನ್ನು ಕೊಡುತ್ತಾ ಕೊನೆಗೆ "ಅವನು ರಾತ್ರಿ ನಾಯಿಗಳನ್ನು

ಕಟ್ಟಿಹಾಕಿರುವ ಕೋಣೆಯ ಮೇಲೆ ಮಲಗಿ ರಾತ್ರಿ ಅಗತ್ಯ ಬಿದ್ದರೆ ನಾಯಿಗಳನ್ನು ನೋಡಿಕೊಳ್ಳಬೇಕು" ಎಂದೂ ಹೇಳಲಾಗಿದೆ!

ಮುಂದೆ ಕೈಗಾರಿಕೀಕರಣ ಹೆಚ್ಚಾದಂತೆ ಹೊಸದೊಂದು ಶೋಷಕವರ್ಗ ಹುಟ್ಟಿದ್ದು, ಆಗ ಊಳಿಗಮಾನ್ಯ ಪದ್ಧತಿಯ ಶೋಷಣೆ ಸ್ವಲ್ಪ ಕಡಿಮೆಯಾದದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಹಾಗೆಂದು ಮಕ್ಕಳ ಕಾರ್ಪಣ್ಯವೇನೂ ಕೊನೆಯಾಗಲಿಲ್ಲ. ಭೂಮಾಲೀಕರಂತೆಯೇ ಕಾರ್ಖಾನೆಯ ಮಾಲೀಕರಿಗೂ ಕಾರ್ಮಿಕರು ಬೇಕಾಗಿದ್ದರು. ಅವರಿಗೆ ಕನಿಷ್ಟ ಸಂಬಳ ಕೊಟ್ಟು ಗರಿಷ್ಟ ಕೆಲಸ ತೆಗೆಯುವುದು ಲಾಭದಾಯಕವೇ ಆಗಿತ್ತು. ಆಗ ಶುರುವಾದ (ಮತ್ತು ಈಗಲೂ ಜಗತ್ತಿನ ಅನೇಕ ಕಡೆ ನಡೆಯುತ್ತಿರುವ) ಶೋಷಣೆಯ ಬಗ್ಗೆ ಎಲ್ಲ ಪ್ರಜ್ಞಾವಂತರಿಗೂ ಗೊತ್ತಿದೆ. ಜನರು (ಮಕ್ಕಳೂ ಸೇರಿದಂತೆ) ವಾರದಲ್ಲಿ ಏಳು ದಿನಗಳೂ ತಮ್ಮ ಎಚ್ಚರದ ಬಹುಪಾಲು ಸಮಯವನ್ನು ಕಠೋರ ಪರಿಸ್ಥಿತಿಯಲ್ಲಿ ದುಡಿಯುತ್ತಾ ಕಳೆಯುತ್ತಿದ್ದರು. ಮಕ್ಕಳ ದುಡಿಮೆಯು ಕೊಂಚವಾದರೂ ಬಿಸಿಲು, ಗಾಳಿ, ಆಡಬಹುದಾದ ವಾತಾವರಣ ಇದ್ದ ಹೊಲಗಳಿಂದ ಕತ್ತಲ, ಕಿಕ್ಕಿರಿದ, ಕೊಳಕು ಕಾರ್ಖಾನೆಗಳಿಗೆ ಸ್ಥಳಾಂತರಗೊಂಡಿತು. ಇಂಗ್ಲೆಂಡಿನಲ್ಲಿ ಕಡುಬಡವರ/ಭಿಕಾರಿಗಳ ಮಕ್ಕಳನ್ನು ಕಾರ್ಖಾನೆಗಳಿಗೆ ಕರೆತಂದು ಅವರನ್ನು ಅಕ್ಷರಶಃ ಗುಲಾಮರನ್ನಾಗಿ ಮಾಡಿದರು. ಆಗ ಸಾವಿರಾರು ಮಂದಿ ರೋಗ–ರುಜಿನ, ಉಪವಾಸ ಮತ್ತು ಬಳಲಿಕೆಯಿಂದ ಅಸುನೀಗಿದರು. ಹತ್ತೊಂಬತ್ತನೇ ಶತಮಾನದವರೆಗೂ ಇಂಗ್ಲೆಂಡಿನಲ್ಲಿ ಮಕ್ಕಳ ದುಡಿಮೆಯನ್ನು ನಿಯಂತ್ರಿಸುವ (ನಿಷೇಧಿಸುವುದಂತೂ ದೂರ ಉಳಿಯಿತು) ಕಾನೂನು ಜಾರಿಗೆ ಬಂದಿರಲಿಲ್ಲ. ಉದಾಹರಣೆಗೆ, 1883ರಲ್ಲಿ ಬಂದ ಹೊಸ ಕಾನೂನಿನ ಪ್ರಕಾರ ಬಟ್ಟೆಯ ಉತ್ಪಾದಕರು 9 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವಂತಿರಲಿಲ್ಲ. ಜತೆಗೆ 10 ರಿಂದ 12 ವರ್ಷದ ಮಕ್ಕಳಿಗೆ ವಾರಕ್ಕೆ 48 ಗಂಟೆಗಿಂತ , 13 ರಿಂದ 17 ವಯಸ್ಸಿನ ಮಕ್ಕಳಿಗೆ ವಾರಕ್ಕೆ 69 ಗಂಟೆಗಿಂತ ಹೆಚ್ಚಿಗೆ ಕೆಲಸವನ್ನು ಕೊಡುವಂತಿರಲಿಲ್ಲ[2].

ಇವುಗಳಿಂದ ನಾವು ಸ್ಥೂಲವಾಗಿ ಗ್ರಹಿಸುವುದೇನೆಂದರೆ ಕೃಷಿಯನ್ನು ಪ್ರಾರಂಭಿಸಿದ ಸಾವಿರಾರು ವರ್ಷಗಳ ನಂತರ ಒಳ್ಳೆಯ ಕಾರ್ಮಿಕನಾಗಲು ತನ್ನ ಸ್ವಂತಿಕೆಯನ್ನು ಹತ್ತಿಕ್ಕಲು ಕಲಿಯುವುದೇ ಮಕ್ಕಳ ಶಿಕ್ಷಣದ ಪ್ರಧಾನ ಅಂಶವಾಗಿತ್ತು. ಒಳ್ಳೆಯ ಮಗುವೆಂದರೆ ಆಟ ಮತ್ತು ಅನ್ವೇಷಣೆಯ ತನ್ನ ಸಹಜ ಸ್ವಭಾವವನ್ನು ಪಕ್ಕಕ್ಕಿಟ್ಟು ಮಾಲೀಕರು ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ಮಾಡುವ ಮಗುವಾಗಿತ್ತು. ಅದೃಷ್ಟವಶಾತ್ ಅಂತಹ ಶಿಕ್ಷಣವು ಯಾವಾಗಲೂ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಮಾನವನ ಸ್ವಭಾವ ಎಷ್ಟು ಶಕ್ತಿಯುತವಾಗಿದೆಯೆಂದರೆ ಈ ಎಲ್ಲ ಪ್ರಯತ್ನಗಳೂ ಆಟ ಮತ್ತು ಅನ್ವೇಷಣೆಯಂತಹ ಸಹಜ ನಡವಳಿಕೆಯನ್ನು ಮಗುವಿನಿಂದ ಬೇರ್ಪಡಿಸಲಾಗಲಿಲ್ಲ.

ಆದರೆ ಇದಕ್ಕೂ ಹಿಂದೆ ಸಾವಿರಾರು ವರ್ಷಗಳಿಂದ ಕೃಷಿಪೂರ್ವ ಜನಾಂಗವು ನಂಬಿ ಆಚರಿಸಿದ್ದ ಶೈಕ್ಷಣಿಕ ಪರಿಕಲ್ಪನೆಗಳು ಕೃಷಿ ಮತ್ತು ಕೈಗಾರಿಕಾಧಾರಿತ ಜನಾಂಗದ ಶಿಕ್ಷಣದ ಪರಿಕಲ್ಪನೆಗಳು ಪರಸ್ಪರ ವಿರುದ್ಧವಾಗಿದ್ದವು ಎಂದು ಭಾವಿಸಲು ಆಧಾರಗಳಿವೆ. ಕೆಲವು ಧಾರ್ಮಿಕ ಮತ್ತು ಕೆಲವು ಧಾರ್ಮಿಕೇತರ ಕಾರಣಗಳಿಂದಾಗಿ 'ಎಲ್ಲರಿಗೂ ಕಡ್ಡಾಯ ಶಿಕ್ಷಣ'ದ ವಿಚಾರ ಹುಟ್ಟಿ ಹರಡಲು ಪ್ರಾರಂಭವಾಯಿತು. ಶಿಕ್ಷಣವೆಂದರೆ ನಮ್ಮ ವಿಚಾರಗಳನ್ನು ಮಕ್ಕಳ ತಲೆಯಲ್ಲಿ ತುರುಕುವುದು ಎಂದೇ ಅರ್ಥ ಮಾಡಿಕೊಂಡಂತಿದೆ.

ಕೈಗಾರಿಕೆಗಳು ಬೆಳೆದು ಯಾಂತ್ರೀಕರಣವು ಹೆಚ್ಚುತ್ತಾ ಹೋದಂತೆ , ಜಗತ್ತಿನ ಕೆಲವು ಪ್ರದೇಶಗಳಲ್ಲಿ ಕಾರ್ಖಾನೆಗಳನ್ನು ನಡೆಸಲು ಮಕ್ಕಳ ಅಗತ್ಯ ಮೊದಲಿಗಿಂತ ಕಡಿಮೆಯಾಯಿತು. ಮಕ್ಕಳ ಬಗ್ಗೆ ದೊಡ್ಡವರ ದೃಷ್ಟಿಕೋನವು ಬದಲಾಗಿ ಬಾಲ್ಯವು ಕಲಿಯುವ ಕಾಲ ಎಂಬ ಅಭಿಪ್ರಾಯವು ಹರಡಿತು. ಜತೆಗೆ ಕಲಿಯುವ ಸ್ಥಳಗಳು (ಶಾಲೆಗಳು) ಪ್ರಾರಂಭವಾದವು. ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣದ ಪರಿಕಲ್ಪನೆ ಯೂರೋ ನಲ್ಲಿ ಮೊಳೆತು 16ನೇ ಶತಮಾನದ ಆದಿ ಭಾಗದಿಂದ 19ನೇ ಶತಮಾನದವರೆಗೂ ವಿಕಾಸಗೊಂಡಿತು. ಈ ಪರಿಕಲ್ಪನೆಯನ್ನು ಬೆಂಬಲಿಸುವವರು ಅನೇಕ ಮಂದಿ ಇದ್ದು, ಮಕ್ಕಳು ಏನನ್ನು ಕಲಿಯಬೇಕೆಂಬುದರ ಬಗ್ಗೆ ಅವರಿಗೆ ಬೇರೆಬೇರೆ ಚಿಂತನೆ ಮತ್ತು ಸಿದ್ಧಾಂತಗಳಿದ್ದವು.

ಸಾರ್ವತ್ರಿಕ ಶಿಕ್ಷಣಕ್ಕೆ ಚಾಲನೆ ದೊರೆತದ್ದು ಹರಡುತ್ತಿದ್ದ ಪ್ರೊಟೆಸ್ಟೆಂಟ್ ಧರ್ಮದ ಕಾರಣದಿಂದಾಗಿ. "ಮುಕ್ತಿ ಸಿಗುವುದು ಪ್ರತಿ ವ್ಯಕ್ತಿಯೂ ಸ್ವತಃ ಧರ್ಮಗ್ರಂಥಗಳನ್ನು ಓದುವುದರಿಂದಲೇ"ಎಂದು ಮಾರ್ಟಿನ್ ಲೂಥರ್‌ನು ಹೇಳಿದ್ದ. ಇದರರ್ಥ ಪ್ರತಿ ವ್ಯಕ್ತಿಯೂ ಓದಲು ಕಲಿಯಬೇಕೆಂದೂ, ಧರ್ಮಗ್ರಂಥಗಳಲ್ಲಿ ಬರೆದಿರುವುದು ಸಂಪೂರ್ಣ ಸತ್ಯವೆಂದೂ, ಮುಕ್ತಿ ಸಿಗುವುದು ಆ ಸತ್ಯಗಳನ್ನು ತಿಳಿದಾಗ ಮಾತ್ರ ಎಂದಂತಾಯಿತು. ಲೂಥರ್ ಮತ್ತು ಪುನರುತ್ಥಾನದ ಇತರ ನಾಯಕರು ಸಾರ್ವಜನಿಕ ಶಿಕ್ಷಣವನ್ನು ಕ್ರೈಸ್ತರ ಒಂದು ಕರ್ತವ್ಯವೆಂದೂ, ಆತ್ಮೋನ್ನತಿಗೆ ಅದು ಹಾದಿಯೆಂದೂ ಪ್ರತಿಪಾದಿಸುತ್ತಿದ್ದರು. ಶಾಲಾವ್ಯವಸ್ಥೆಯನ್ನು ರೂಪುಗೊಳಿಸಿದ ಪ್ರಮುಖ ದೇಶವಾದ ಜರ್ಮನಿಯು 17 ನೇ ಶತಮಾನದ ಕೊನೆಯಲ್ಲಿ ತನ್ನ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಮಕ್ಕಳು ಶಾಲೆಗೆ ಹೋಗಬೇಕೆಂಬ ಕಾಯದೆಯನ್ನು ಜಾರಿಗೊಳಿಸಿತ್ತು. ಆದರೆ ಶಾಲೆಗಳನ್ನು ನಡೆಸುತ್ತಿದ್ದುದು ಪ್ರಭುತ್ವವಲ್ಲ. ಬದಲಾಗಿ ಲೂಥರೆನ್ ಚರ್ಚ್[3].

ಅಮೆರಿಕಾದಲ್ಲಿ 17ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಶಾಲಾಶಿಕ್ಷಣವನ್ನು ಮೊದಲು ಕಡ್ಡಾಯ ಮಾಡಿದ್ದು ಮೆಸಾಚುಸೆಟ್ಸ್ ಪ್ರಾಂತ್ಯ. ಮಕ್ಕಳನ್ನು 'ಶುದ್ಧ/ಪವಿತ್ರರನ್ನಾಗಿ ಮಾಡುವುದು' ಇದರ ಘೋಷಿತ ಉದ್ದೇಶವಾಗಿತ್ತು. 1690 ರಿಂದ

ಮೆಸಾಚುಸೆಟ್ಸ್ ಮತ್ತು ಸುತ್ತಮುತ್ತಲಿನ ಪ್ರದೇಶದ ಮಕ್ಕಳು "ನ್ಯೂ ಇಂಗ್ಲೆಂಡ್ ಪ್ರೈಮರ್"ನಿಂದ (ಇದನ್ನು "ನ್ಯೂ ಇಂಗ್ಲೆಂಡಿನ ಬೈಬಲ್" ಎಂದೂ ಕರೆಯುತ್ತಿದ್ದರು) ಓದುವುದನ್ನು ಕಲಿತರು. ವರ್ಣಮಾಲೆಯನ್ನು ಕಲಿಯಲು ಇದರಲ್ಲಿ ಶಿಶುಗೀತೆಗಳನ್ನು ಅಳವಡಿಸಲಾಗಿತ್ತು. ದೇವರಲ್ಲಿ ಭಯ ಮತ್ತು ಹಿರಿಯರ ಕುರಿತು ಮಕ್ಕಳು ಹೊಂದಿರಬೇಕಾದ ಕರ್ತವ್ಯಭಾವದ ಬಗ್ಗೆ ಈ ಪಠ್ಯದಲ್ಲಿ ಪಾಠಗಳು, ಸ್ತೋತ್ರ ಇತ್ಯಾದಿಗಳಿದ್ದವು.

ಉದ್ದಿಮೆಯ ಮಾಲೀಕರಿಗೆ ಶಾಲೆಯು ಉಪಯುಕ್ತ ಕಾರ್ಮಿಕರನ್ನು ರೂ ಸುವ ವಿಧಾನವಾಗಿ ತೋರಿತು. ಅವರಿಗೆ ಕಂಡ ಮಹತ್ವದ ಅಂಶಗಳೆಂದರೆ ಸಮಯಪಾಲನೆ, ಕೊಟ್ಟ ನಿರ್ದೇಶನಗಳನ್ನು ಅರ್ಥಮಾಡಿಕೊಳ್ಳುವ ಗುಣ, ಗಂಟೆಗಟ್ಟಲೆ ನೀರಸ ಕೆಲಸವನ್ನು ಮಾಡುವ ಸ್ವಭಾವ ಮತ್ತು ಕೊಂಚ ಓದು ಮತ್ತು ಬರೆಯುವ ಕೌಶಲ. ಅವರ ದೃಷ್ಟಿಯಲ್ಲಿ (ಅವರು ಹೀಗೆ ಹೇಳದಿರಬಹುದು) ಶಾಲೆಯಲ್ಲಿ ಕಲಿಸುವ ವಿಷಯಗಳು ನೀರಸವಾಗಿದ್ದಷ್ಟೂ ಒಳ್ಳೆಯದಿತ್ತು.

ರಾಷ್ಟ್ರೀಯತೆಯ ಕಲ್ಪನೆ ಹರಳುಗಟ್ಟಿ ಕೇಂದ್ರೀಕರಣವು ಹೆಚ್ಚಾದಂತೆ ದೇಶದ ನಾಯಕರು ಶಾಲೆಯನ್ನು ದೇಶಭಕ್ತರು ಮತ್ತು ಭವಿಷ್ಯದ ಸೈನಿಕರನ್ನು ಸೃಷ್ಟಿಸುವ ಸಾಧನವನ್ನಾಗಿ ನೋಡತೊಡಗಿದರು. ಅವರಿಗೆ ನಿರ್ಣಾಯಕವೆನಿಸಿದ ಪಾಠಗಳೆಂದರೆ ತಾಯ್ನಾಡಿನ ಹಿರಿಮೆ, ದೇಶನಾಯಕರ ಸ್ಫೂರ್ತಿಯುತ ಜೀವನಗಾಥೆ ಮತ್ತು ನೈತಿಕ ಮೌಲ್ಯಗಳು, ದುಷ್ಟಶಕ್ತಿಗಳಿಂದ ದೇಶವನ್ನು ರಕ್ಷಿಸಬೇಕಾದ ಅಗತ್ಯದ ಬಗ್ಗೆ ಅರಿವು.

ಇವೆಲ್ಲದರ ನಡುವೆಯೂ ಮಕ್ಕಳ ಬಗ್ಗೆ ನಿಜವಾದ ಕಾಳಜಿ ಇಟ್ಟುಕೊಂಡು ಕೆಲಸ ಮಾಡಿದ ಸಮಾಜದ ಪರಿವರ್ತನೆಯ ಹರಿಕಾರರ ಬಗ್ಗೆ ಹೇಳಲೇಬೇಕು. ಅವರ ಸಂದೇಶಗಳು ಇಂದು ನಮ್ಮ ಕಿವಿಗಳಿಗೆ ಇಂಪಾಗಿ ಕೇಳಿಸುತ್ತವೆ. ಇವರು ಶಾಲೆಗಳು ಹೊರಜಗತ್ತಿನ ಕೆಟ್ಟ ಪ್ರಭಾವದಿಂದ ಮಕ್ಕಳನ್ನು ರಕ್ಷಿಸಲು ಸಾಧ್ಯವೆಂದೂ ಉತ್ತಮ, ಸಮರ್ಥ ವಯಸ್ಕರಾಗಿ ಚೆನ್ನಾಗಿ ಬಾಳಲು ಕಲಿಯಲು ಶಾಲೆ ಸಾಧನವೆಂದೂ ತಿಳಿದವರು.ಆದರೆ ಮಕ್ಕಳು ಇಂಥದನ್ನೇ ಕಲಿಯಬೇಕೆಂದು ಅವರು ನಂಬಿದ್ದರು. ಮಕ್ಕಳು ನೀತಿಪಾಠಗಳು ಮತ್ತು ಲ್ಯಾಟಿನ್ ಮತ್ತು ಗಣಿತದಂತಹ ಶಾಸ್ತ್ರೀಯ ವಿಷಯಗಳನ್ನು ಕಲಿತು ಬುದ್ಧಿ ಬೆಳೆಸಿಕೊಂಡು ಮೇಧಾವಿಗಳಾಗಬೇಕೆಂದು ಅವರ ಅಭಿಲಾಷೆಯಾಗಿತ್ತು.

ಇದರರ್ಥವೇನೆಂದರೆ, ಮಕ್ಕಳು ಶಾಲೆಯಲ್ಲಿ ಏನನ್ನು ಕಲಿಯಬೇಕು ಎಂಬುದರ ಬಗ್ಗೆ ಶಾಲೆಯ ಹುಟ್ಟಿಗೆ ಕಾರಣರಾದ ಮತ್ತು ಬೆಂಬಲ ನೀಡಿದ ಎಲ್ಲರಿಗೂ ಅವರವರವೇ ಆದ ಖಚಿತ ಅಭಿಪ್ರಾಯಗಳಿದ್ದವು. ಅವರಷ್ಟಕ್ಕೆ ಅವರನ್ನು ಕಲಿಯಲು

ಬಿಟ್ಟರೆ ಮಕ್ಕಳು ಎಂಥ ಸಮೃದ್ಧ ಕಲಿಕಾ ವಾತಾವರಣದಲ್ಲಿಯೂ ದೊಡ್ಡವರಿಗೆ ಮಹತ್ವವೆನಿಸುವ ವಿಷಯಗಳನ್ನು ಕಲಿಯುವುದಿಲ್ಲವೆಂಬ ವಿಚಾರದಲ್ಲಿ ಮಾತ್ರ ಎಲ್ಲರಿಗೂ ಸಹಮತ ಇದ್ದಿತು. ಅವರೆಲ್ಲರೂ ಶಾಲೆಯನ್ನು "ನಮ್ಮ ವಿಚಾರಗಳನ್ನು, ಆಲೋಚನಾಕ್ರಮವನ್ನು ಮಕ್ಕಳ ತಲೆಯಲ್ಲಿ ತುರುಕುವ ಸ್ಥಳ" ಎಂದೇ ಭಾವಿಸಿದ್ದರು. ಇದನ್ನು ಸಾಧಿಸಲು ಅವರು ಕಂಡುಕೊಂಡ ಪರಿಣಾಮಕಾರೀ ವಿಧಾನವೆಂದರೆ ಬಲವಂತದ ಪುನರಾವರ್ತನೆ ಮತ್ತು ಅದನ್ನು ದೃಢೀಕರಿಸಲು ನೆನ ನ ಪರೀಕ್ಷೆ.

ಶಾಲಾ(ಅ)ವ್ಯವಸ್ಥೆಯು ಬಲಗೊಳ್ಳುತ್ತಾ ಹೋದಂತೆ ಕಲಿಯುವುದು ಮಕ್ಕಳ ಕೆಲಸ ಎಂದು ಸಮಾಜ ಆಲೋಚಿಸತೊಡಗಿ ಹೊಲಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ "ಕೆಲಸ" ತೆಗೆಯಲು ಯಾವ ಒತ್ತಾಯಪೂರ್ವಕ ವಿಧಾನಗಳನ್ನು ಬಳಸುತ್ತಿದ್ದರೋ ಅವೇ ವಿಧಾನಗಳನ್ನು ತರಗತಿಗೂ ವರ್ಗಾಯಿಸಿದರು.

ಕಟ್ಟುಪಾಡುಗಳಿಗೆ ಒಳಪಡದೆ ಆಟವಾಡುತ್ತಾ ತಮ್ಮ ಸುತ್ತಲಿನ ಜಗತ್ತನ್ನು ಅನ್ವೇಷಿಸುವ ಸಹಜ ಪ್ರವೃತ್ತಿಯಿರುವ ಮಕ್ಕಳಿಗೆ ಪಾಠಗಳ ಪುನರಾವರ್ತನೆ ಮತ್ತು ಉರುಹಚ್ಚುವ ಕೆಲಸ ಬಹಳ ಕಷ್ಟದ್ದು. ಹೇಗೆ ಹೊಲ ಮತ್ತು ಕಾರ್ಖಾನೆಯ ಕೆಲಸಕ್ಕೆ ಹೊಂದಿಕೊಳ್ಳಲಿಲ್ಲವೋ ಹಾಗೆಯೇ ಮಕ್ಕಳು ಶಾಲಾಪದ್ಧತಿಗೂ ಹೊಂದಿಕೊಳ್ಳಲಿಲ್ಲ. ಆದರೆ ದೊಡ್ಡವರಿಗೆ ಇದರಲ್ಲಿ ಆಶ್ಚರ್ಯ ಪಡುವಂಥದ್ದೇನೂ ಇರಲಿಲ್ಲ. ಇತಿಹಾಸದ ಈ ಕಾಲಘಟ್ಟದ ವೇಳೆಗೆ, ಮಕ್ಕಳಿಗೆ ಸ್ವಂತಿಕೆ ಎಂಬುದೊಂದಿರುತ್ತದೆ ಎಂಬುದನ್ನು ದೊಡ್ಡವರು ಮರೆತು ಎಷ್ಟೋ ಕಾಲವಾಗಿತ್ತು. ಮಕ್ಕಳು ಶಾಲೆಯಲ್ಲಿ ಕಲಿಯುವಂತೆ ಮಾಡಲು ಅವರ ಅಸ್ಮಿತೆಯನ್ನು ಬಲಿಕೊಡಬೇಕು ಎಂದು ಎಲ್ಲರೂ ತೀರ್ಮಾನಿಸಿಬಿಟ್ಟಿದ್ದರು. ಎಲ್ಲ ತರಹದ ಶಿಕ್ಷೆಗಳು ಶಿಕ್ಷಣದ ಅವಿಭಾಜ್ಯ ಅಂಗ ಎಂದು ಎಣಿಸಿದ್ದರು. ಒಂದೊಂದು ಶಾಲೆಯಲ್ಲಿ ಮಕ್ಕಳಿಗೆ ಆಯ್ದ ತರಗತಿಗಳಲ್ಲಿ ಆಟವಾಡಲು ಅನುಮತಿಯಿರುತ್ತಿತ್ತು – ಇದು ಕೂಡ ಅವರಲ್ಲಿ ಮಡುಗಟ್ಟಿದ್ದ ಅತೀವ ಒತ್ತಡವನ್ನು ಹೊರಹಾಕಲು ಮಾತ್ರ. ಆಟವು ಕಲಿಕಾಸಾಧನವೆಂದು ಭಾವಿಸಿರಲಿಲ್ಲ. ತರಗತಿಯಲ್ಲಿ ಆಟವು ಕಲಿಕೆಯ ಶತ್ರುವಾಗಿತ್ತು.

ಮಕ್ಕಳು ಆಟವಾಡುವುದರ ಬಗೆಗೆ ಹದಿನೆಂಟನೇ ಶತಮಾನದ ಶಾಲಾಧಿಕಾರಿಗಳ ಪ್ರಧಾನ ಮನೋಧರ್ಮವನ್ನು ವೆಸ್ಲೆ ಶಾಲಾಸಮೂಹ ಪಾಲಿಸುತ್ತಿದ್ದ ಜಾನ್ ವೆಸ್ಲೆಯ ಈ ನಿಯಮಗಳಿಂದ ತಿಳಿಯಬಹುದು. "ಆಟದ ದಿನಗಳು ನಮ್ಮಲ್ಲಿಲ್ಲ. ಹಾಗೆಯೇ ಯಾವ ದಿನದ ಯಾವ ಸಮಯದಲ್ಲೂ ಆಟವನ್ನು ಆಡಲು ಅಪ್ಪಣೆ ಇಲ್ಲ. ಏಕೆಂದರೆ ಮಕ್ಕಳಾಗಿರುವಾಗ ಆಡುತ್ತಿದ್ದರೆ ದೊಡ್ಡವರಾದ ಮೇಲೆಯೂ ಆಡುತ್ತಲೇ ಇರುತ್ತಾರೆ." [5]

ಹೊಲಗಳಲ್ಲಿ ಮತ್ತು ತದನಂತರ ಕಾರ್ಖಾನೆಗಳಲ್ಲಿ ಮಕ್ಕಳಿಂದ ಕೆಲಸ ತೆಗೆಯಲು ಬಳಕೆಯಲ್ಲಿದ್ದ ಬಲವಂತದ ವಿಧಾನಗಳು ಸಹಜವಾಗಿಯೇ ಶಾಲೆಗಳಿಗೆ ಸ್ಥಳಾಂತರಗೊಂಡವು. ಈಗ ಉದ್ದೇಶ ಬೇರೆಯಾಗಿತ್ತು ಅಷ್ಟೇ. ಕಡಿಮೆ ಸಂಬಳ ಪಡೆಯುತ್ತಿದ್ದ, ಸರಿಯಾದ ಪೂರ್ವಸಿದ್ಧತೆ ಮಾಡಿಕೊಳ್ಳದ ಶಿಕ್ಷಕರು ನಿಜಕ್ಕೂ ಹಿಂಸಾರತಿಯ ಪ್ರವೃತ್ತಿಯುಳ್ಳವರಾಗಿದ್ದರು. ಜರ್ಮನಿಯ ಶಿಕ್ಷಕರೊಬ್ಬರು ತನ್ನ 51 ವರ್ಷದ ಸುದೀರ್ಘ ಸೇವೆಯಲ್ಲಿ ನೀಡಿದ ಶಿಕ್ಷೆಯ ದಾಖಲೆ ಲಭ್ಯವಿದೆ. "911,527 ದೊಣ್ಣೆಯ ಹೊಡೆತಗಳು, 24,010 ಬೆತ್ತದ ಥಳಿತಗಳು, 20,989 ಬಾರಿ ರೂಲರ್‌ನಿಂದ ಹೊಡೆದದ್ದು, 136,715 ಬಾರಿ ಕೈಯಿಂದ ಹೊಡೆದದ್ದು, 10,235 ಬಾರಿ ಮಗುವಿನ ಬಾಯಿಗೆ ಹೊಡೆದದ್ದು, 7905 ಸಾರಿ ಕಿವಿಯ ಮೇಲೆ ಅಪ್ಪಳಿಸಿದ್ದು, 1,118,800 ಸಾರಿ ತಲೆಗೆ ಹೊಡೆತ [6]. ಆ ಶಿಕ್ಷಕರು ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಟ್ಟುಕೊಂಡಿರುವುದು ಸ್ಪಷ್ಟವಾಗಿಯೇ ಇದೆ.

18ನೇ ಶತಮಾನದಲ್ಲಿ ಮೆಸಾಚುಸೆಟ್ಸ್ ಪ್ರಾಂತ್ಯದಲ್ಲಿದ್ದ ಪಾದ್ರಿ ಜಾನ್ ಬರ್ನಾಡ್ ತಮ್ಮ ಆತ್ಮಚರಿತ್ರೆಯಲ್ಲಿ ತಾವು ಚಿಕ್ಕವರಾಗಿದ್ದಾಗ ಹೇಗೆ ತಮ್ಮ ಶಿಕ್ಷಕರಿಂದ ಚೆನ್ನಾಗಿ ಹೊಡೆತ ತಿನ್ನುತ್ತಿದ್ದರೆಂದು ಮೆಚ್ಚುಗೆಯಿಂದ ಬರೆಯುತ್ತಾರೆ. ಅವರು ಆಟ ಆಡಬೇಕೆಂಬ ಅದಮ್ಯ ಆಸಕ್ತಿಗಾಗಿ ಹೊಡೆತ ತಿನ್ನುತ್ತಿದ್ದರು; ತರಗತಿಯಲ್ಲಿ ಕಲಿಯದಿದ್ದರೆ ಹೊಡೆತ ಬೀಳುತ್ತಿತ್ತು; ಅವರ ಸಹಪಾಠಿಗಳು ಕಲಿಯದಿದ್ದರೂ ಇವರಿಗೆ ಹೊಡೆತ ಬೀಳುತ್ತಿತ್ತು. ಇವರು ತುಂಬ ಜಾಣರಾಗಿದ್ದರಿಂದ ತರಗತಿಯ ಮಾನಿಟರ್ ಆಗಿದ್ದರು; ಉಳಿದ ಮಕ್ಕಳು ಕಲಿಯುವಂತೆ ಮಾಡುವುದು ಇವರ ಜವಾಬ್ದಾರಿಯಾಗಿತ್ತು; ಅವರು ಯಾವುದಾದರೊಂದು ಪಾಠವನ್ನು ಉರು ಹೊಡೆದು ಒ ್ಪಸಲು ವಿಫಲರಾದರೆ ಆಗಲೂ ಇವರಿಗೆ ಹೊಡೆತ ಬೀಳುತ್ತಿತ್ತು. ಇವರ ಒಂದೇ ಒಂದು ದೂರೆಂದರೆ ಸಹಪಾಠಿಯೊಬ್ಬ ಇವರಿಗೆ ಹೊಡೆತ ಬೀಳಲಿ ಎಂದು ಬೇಕೆಂದೇ ಪಾಠವನ್ನು ತಪ್ಪಾಗಿ ಹೇಳಿದ್ದನಂತೆ. ಇದಕ್ಕೆ ಪರಿಹಾರವನ್ನೂ ಕಂಡುಕೊಂಡರೆನ್ನಿ. ಹೊರಗೆ ಒಬ್ಬನೇ ಸಿಕ್ಕಾಗ ಅವನನ್ನು ತದುಕಿ, ಹೀಗೆಯೇ ಮಾಡುತ್ತಿದ್ದರೆ ಇನ್ನೂ ತದುಕುವುದಾಗಿ ಎಚ್ಚರಿಸಿದ್ದರಂತೆ. ಆಹ್, ಚೆನ್ನದಂಥ ದಿನಗಳು ಅವು!

ಆದರೆ ಈಚೀಚೆಗೆ ಶಾಲೆಗಳಲ್ಲಿ ಹಿಂಸೆಯು ಮೊದಲಿನಷ್ಟಿಲ್ಲವಾದರೂ ಅದರ ಹಿಂದಿನ ಮನೋಧರ್ಮದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಕಲಿಯುವುದು ಮಕ್ಕಳ ಕೆಲಸವೆಂದೇ ಭಾವಿಸಿದ್ದು ಆ ಕೆಲಸವನ್ನು ಅವರು ಮಾಡುವಂತೆ ಮಾಡಲು ಅಧಿಕಾರದ ಮತ್ತು ಬಲವಂತದ ವಿಧಾನಗಳನ್ನು ಇಂದಿಗೂ ಬಳಸಲಾಗುತ್ತಿದೆ.

ಇಂದು ನಾವು "ಪಾರಂಪರಿಕ" ಎಂದು ಕರೆಯುವ ಸಾರ್ವಜನಿಕ ಶಾಲಾಶಿಕ್ಷಣ ಪದ್ಧತಿಯು 19 ಮತ್ತು 20ನೇ ಶತಮಾನದಲ್ಲಿ ಹಂತಹಂತವಾಗಿ ವಿಕಾಸಗೊಂಡಿತು. ಮಕ್ಕಳಿಗೆ ಶಿಸ್ತು ಕಲಿಸುವ ವಿಧಾನಗಳು ಹೆಚ್ಚು ಮಾನವೀಯವಾಗಿ ಪರಿವರ್ತನೆಗೊಂಡವು. ಕನಿಷ್ಟಪಕ್ಷ ಅವು ಕ್ರೌರ್ಯದಿಂದ ತುಂಬಿರಲಿಲ್ಲ; ಪಾಠಗಳು ಹೆಚ್ಚು ಜಾತ್ಯತೀತ/ಮತಾತೀತ ಎನಿಸಿಕೊಂಡವು. ಜ್ಞಾನದ ಪರಿಧಿ ವಿಸ್ತರಿಸಿದಂತೆ ಪಠ್ಯವಸ್ತುವೂ ವಿಸ್ತೃತಗೊಂಡಿತು. ಅದರ ಜತೆ ಕಲಿಸುವ ವಿಷಯಗಳೂ ಹೆಚ್ಚಿದವು. ಕ್ರಮೇಣ ಶಾಲಾ ದಿನಗಳೂ, ದಿನದಲ್ಲಿ ಶಾಲೆಯಲ್ಲಿ ಇರಬೇಕಾದ ಗಂಟೆಗಳೂ, ಮಕ್ಕಳು ಶಾಲೆಗೆ ಕಡ್ಡಾಯವಾಗಿ ಹೋಗಬೇಕಾದ ವರ್ಷಗಳೂ ಸಹ. ಕುಟುಂಬ, ಹೊಲ ಮತ್ತು ಕಾರ್ಖಾನೆಗಳ ಬದಲಿಗೆ ಮಕ್ಕಳ ಪ್ರಧಾನ ಕೆಲಸವಾಗಿ ಶಾಲೆ ಹೊರಹೊಮ್ಮಿತು. ತಮ್ಮ ಉದ್ಯೋಗದ ಜಾಗದಲ್ಲಿ ಹೇಗೆ ದೊಡ್ಡವರು 8 ಗಂಟೆ ಕಳೆಯುತ್ತಾರೋ ಹಾಗೆ ಮಕ್ಕಳು ಶಾಲೆಯಲ್ಲಿ 6 ಗಂಟೆ ಮತ್ತೆ ಹೋಂವರ್ಕ್ ಸುಮಾರು 1 ಗಂಟೆ, ಜತೆಗೆ ಇನ್ನೊಂದಿಷ್ಟು ಸಮಯ ಬೇರೆಬೇರೆ ವಿಶೇಷ ತರಗತಿಗಳಲ್ಲಿ ಶಾಲೆಯ ಒಳಗೋ ಇಲ್ಲ ಹೊರಗೋ ಹಾಜರಾಗುತ್ತಿರುತ್ತಾರೆ. ದಿನಗಳೆದಂತೆ, ಮಕ್ಕಳ ಬದುಕು ಶಾಲಾ ಪಠ್ಯದ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತದೆ ಎನ್ನಬಹುದು. ಜಗತ್ತಿನಾದ್ಯಂತ ಹೇಗೆ ದೊಡ್ಡವರನ್ನು ಅವರ ಉದ್ಯೋಗ ಇಲ್ಲವೇ ವೃತ್ತಿಯಿಂದ ಗುರುತಿಸುತ್ತೇವೆಯೋ ಹಾಗೆಯೇ ಮಕ್ಕಳನ್ನು ಅವರು ಓದುತ್ತಿರುವ ತರಗತಿಯಿಂದ ಗುರುತಿಸುವುದು ಸಹಜವೇನೋ ಎನಿಸಿಬಿಟ್ಟಿದೆ.

ನಿಜ. ಶಾಲೆಗಳು ಮೊದಲಿನಷ್ಟು ಕಠೋರವಾಗಿಲ್ಲ; ಆದರೆ ಕಲಿಕೆಯ ಸ್ವರೂಪದ ಬಗ್ಗೆ ಅವುಗಳ ನಿಲುವು ಖಂಡಿತ ಬದಲಾಗಿಲ್ಲ; ಕಷ್ಟಪಡದೇ ಕಲಿಯಲಾಗುವುದಿಲ್ಲ; ಅದು ಮಕ್ಕಳಿಗೆ ಬಲವಂತವಾಗಿ ಮಾಡಬೇಕು; ಮಕ್ಕಳು ತಾವೇ ಸ್ವನಿರ್ದೇಶಿತ ಚಟುವಟಿಕೆಗಳಿಂದ ಸಹಜವಾಗಿ ಕಲಿಯುವುದಿಲ್ಲ. ಮಕ್ಕಳು ಕಲಿಯಬೇಕಾದ ನಿರ್ದಿಷ್ಟ ಪಾಠಗಳನ್ನು ವೃತ್ತಿಪರ ಶಿಕ್ಷಣತಜ್ಞರೇ (ಮಕ್ಕಳಲ್ಲ!) ವಿನ್ಯಾಸಗೊಳಿಸಬೇಕು ಇತ್ಯಾದಿ. ಒಟ್ಟಾರೆ, ಇಂದಿಗೂ ಶಿಕ್ಷಣವು ಮೊದಲಿದ್ದಂತೆ ಮೂಲಭೂತವಾಗಿ ದೊಡ್ಡವರ ಅಜೆಂಡಾಗಳನ್ನು ಮಕ್ಕಳ ತಲೆಯಲ್ಲಿ ತುರುಕುವುದೇ ಆಗಿದೆ. (ವಿಚಿತ್ರವೆಂದರೆ ಇದನ್ನು ಇತ್ತೀಚೆಗೆ "ಶೋಧ" ಎಂಬ ಹೆಸರಿನಿಂದ ಜನ ್ರಿಯ ಮಾಡಲಾಗುತ್ತಿದೆ.)

ಕಾಲ ಬದಲಾದಂತೆ ಮೇಲ್ನೋಟಕ್ಕೆ ತೋರುತ್ತದೆ. ಜಾಣ ಶಿಕ್ಷಕರು ಇಂದಿನ ದಿನಗಳಲ್ಲಿ ಮಕ್ಕಳು ತಮ್ಮ ಪಾಠಗಳನ್ನು ನಲಿಯುತ್ತಾ ಕಲಿಯುವಂತೆ ಮಾಡಲು "ಆಟ"ಎಂಬ ಹೆಸರಿನ ಸಾಧನವೊಂದನ್ನು ಬಳಸುವುದುಂಟು. ಮಕ್ಕಳಿಗೆ ಕೆಲವೊಮ್ಮೆ ಸ್ವಲ್ಪ ಬಿಡುವಿನ ಸಮಯವನ್ನೂ ಕೊಡುವುದುಂಟು. ಆದರೆ ಮಕ್ಕಳು ತಾವೇ ಆಡುವ ಆಟಗಳು ಅವರ ಶಿಕ್ಷಣಕ್ಕೆ ಸೂಕ್ತ ಮತ್ತು ಉತ್ತಮ ಬುನಾದಿಯಾಗದು ಎಂಬ ನಂಬಿಕೆಗೆ ಈಗಲೂ ಅಂಟಿಕೊಂಡಿದ್ದಾರೆ. ಆಟದ ಮೇಲಿರುವ ಆಂತರಿಕ ಆಸಕ್ತಿಯ

ಕಾರಣದಿಂದಾಗಿ ಒಂದು ಕಡೆ ಸುಮ್ಮನೆ ಕೂರಲು ಸಾಧ್ಯವಿಲ್ಲದ ಮಕ್ಕಳನ್ನು ಈಗ ಕೋಲು ತೆಗೆದುಕೊಂಡು ಹೊಡೆಯುವುದಿಲ್ಲ. ಬದಲಾಗಿ ಅವರನ್ನು ಡಾಕ್ಟರರ ಬಳಿಗೆ ಕರೆದುಕೊಂಡು ಹೋಗಿ ಮಾತ್ರೆಗಳನ್ನು ಅವರ ಬಾಯಿಗೆ ತುರುಕುತ್ತಾರೆ!

ಇಂದಿನ ಶಾಲೆಗಳ ಒಂದು ಸಾಧನೆಯೆಂದರೆ ಬೇಟೆಯಾಡಿ, ಗೆಡ್ಡೆ ಗೆಣಸು ತಿಂದು ಬದುಕುತ್ತಿದ್ದ ಜನಾಂಗದ ಮಕ್ಕಳಿಗೆ ತಿಳಿಯದಿದ್ದ ವ್ಯತ್ಯಾಸವೊಂದನ್ನು ಇಂದಿನ ಮಕ್ಕಳು ಕಲಿಯುವಂತೆ ಮಾಡಿರುವುದು. ಅದೆಂದರೆ ಕೆಲಸ ಮತ್ತು ಆಟದ ನಡುವೆ ಇರುವ ವ್ಯತ್ಯಾಸ. “ನೀವು ಕಲಿಯುವುದನ್ನು ಮುಗಿಸಿ. ಆಮೇಲೆ ಬೇಕೆಂದರೆ ನೀವು ಆಡಬಹುದು” ಎಂದು ಶಿಕ್ಷಕರು ಶಾಲಾ ಮಕ್ಕಳಿಗೆ ಹೇಳುತ್ತಿರುತ್ತಾರೆ. ಇದರ ಸ್ಪಷ್ಟ ಸಂದೇಶವೇನೆಂದರೆ ಶಾಲಾ ಕಲಿಕೆಯ ಸಲುವಾಗಿ ಮಾಡುವುದೆಲ್ಲಾ "ಕೆಲಸ"? ಅದು ಯಾರಿಗೂ ಇಷ್ಟವಿಲ್ಲ; ಆದರೆ ಅನಿವಾರ್ಯ. “ಆಟ” ಎಲ್ಲರಿಗೂ ಇಷ್ಟ; ಆದರೆ ಅದಕ್ಕೆ ಹೆಚ್ಚಿನ ಬೆಲೆಯಿಲ್ಲ. ನಮ್ಮ ಶಾಲಾಪದ್ಧತಿ ನಮಗೆ ಕಲಿಸಿದ ಅತಿದೊಡ್ಡ ಪಾಠ ಇದೇ ಇರಬೇಕು. ಶಾಲೆಗೆ ಹೋಗುವ ಮಕ್ಕಳು ಬೇರೇನನ್ನು ಕಲಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಕೆಲಸ ಬೇರೆ, ಆಟ ಬೇರೆ; ಕಲಿಯುವುದು ಕೆಲಸ, ಅದು ಆಟವಲ್ಲ ಎಂಬುದನ್ನಂತೂ ಖಂಡಿತ ಕಲಿಯುತ್ತಾರೆ.

ಟಿಪ್ಪಣಿ / ಆಕರ ಲೇಖನಗಳು

1. Quoted by Orme, N. (2001), Medieval children, p 315.

2. Mulhern, J. (1959), A history of education: A social interpretation, 2nd edition.

3. Again, Mulhern (1959).

4. Gutek, G. L. (1991), An historical introduction to American education, 2nd edition.

5. Quoted by Mullhern (1959, p 383).

6. Again, in Mullhern (1959, p 383).

7. From “Autobiography of the Rev. John Bernard,” Collections of the Massachusetts Historical Society, 3rd Ser., 5 [1836]: 178-182. Extracted in J. Martin (Ed.) (2007), Children in Colonial America.

ಡಾ. ೀಟರ್ ಗ್ರೇ ಅವರು ಅಮೆರಿಕಾ ದೇಶದ ಬಾಸ್ಟನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು "Free to learn" ಮತ್ತು "Psychology" ಎಂಬ ಪ್ರಸಿದ್ಧ ಪುಸ್ತಕಗಳ ಲೇಖಕರಾಗಿದ್ದಾರೆ. ಇವರ ಸಂಶೋಧನಾ ಕ್ಷೇತ್ರಗಳು ಪ್ರಧಾನವಾಗಿ ತೌಲನಿಕ, ವಿಕಾಸಾಧಾರಿತ, ಅಧಿವೃದ್ಧಿ ಹಾಗೂ ಶೈಕ್ಷಣಿಕ ಮನೋವಿಜ್ಞಾನವಾಗಿವೆ. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದ ನಂತರ ಇವರು ರಾಕ್‌ಫೆಲ್ಲರ್ ವಿಶ್ವವಿದ್ಯಾನಿಲಯದಿಂದ ಜೀವಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಇವರ ಪ್ರಸಕ್ತ ಸಂಶೋಧನೆ ಮತ್ತು ಬರವಣಿಗೆ ಹೆಚ್ಚಾಗಿ ಮಕ್ಕಳ ಕಲಿಕೆಯ ಸಹಜ ವಿಧಾನಗಳು ಮತ್ತು ಆಟದ ಆಜೀವಪರ್ಯಂತ ಉಪಯುಕ್ತತೆಯ ಕುರಿತು ಇವೆ. ಇದಲ್ಲದೆ ಇವರು "ಸ್ವನಿರ್ದೇಶಿತ ಶಿಕ್ಷಣಕ್ಕಾಗಿ ಸಮಾನಮನಸ್ಕರ ಒಕ್ಕೂಟ"ದಲ್ಲಿ ಸಕ್ರಿಯರಾಗಿದ್ದಾರೆ. ೀಟರ್ ಗ್ರೇ ಅವರ ಇನ್ನಿತರ ಆಸಕ್ತಿಗಳೆಂದರೆ ಸೈಕ್ಲಿಂಗ್, ಕಯಾಕಿಂಗ್ ಮತ್ತು ಕೈತೋಟ.

ಈ ಲೇಖನವನ್ನು ಅನುವಾದಿಸಿರುವ ಶ್ರೀ ಎಸ್.ಎನ್.ಗಣನಾಥ ಅವರು ಶಾಲಾಶಿಕ್ಷಣ ಕ್ಷೇತ್ರದಲ್ಲಿ ಎರಡು ದಶಕಕ್ಕೂ ಹೆಚ್ಚು ಕಾಲ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ.

ಸಂಪರ್ಕ :

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ

#76, "ಪುಷ್ಪಾಂಜಲಿ" 3ನೇ ಅಡ್ಡರಸ್ತೆ, ಶಿವಗಿರಿ,

ಧಾರವಾಡ – 580007

ದೂ: 9986661055

e-mail: dhwanitrust@gmail.com
sngananath@gmail.com

ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಶಿಕ್ಷಾಂತರ್
shikshaantar

Tech Mahindra FOUNDATION